ಶ್ರೀ ವಾಟಾಳ್ ನಾಗರಾಜ್:- ಈಗ ಬೃಹನ್ನಳೆಯಾಗಿ ವೇಷವನ್ನು ಬದಲಾವಣೆ ಮಾಡುತ್ತಿದ್ದಾರೆ ಅಷ್ಟೆ.

ಶ್ರೀ ಸಿ. ಬೈರೇಗೌಡ:- ಇವತ್ತಿನ ದಿವಸ ಸ್ಪಷ್ಟವಾಗಿ ಉತ್ತರ ಕುಮಾರರ ಉತ್ತರವನ್ನು ಕೊಡುತ್ತಿದ್ದಾರೆ. ಇದು ಬಹಳ ದುರಾದೃಷ್ಟ. ಒಂದು ಮಾತು, ನಾವೆಲ್ಲ ಸಹಕಾರ ಕೊಡಬೇಕೆಂದು ಹೇಳಿದರು. ಈ ಸದನದಲ್ಲಿರತಕ್ಕ ಯಾವ ಸದಸ್ಯರು ನಿಮಗೆ ಅಡ್ಡಿಯನ್ನು ಮಾಡುತ್ತಿದ್ದಾರೆ? ಈ ಕಡೆ ಇರತಕ್ಕವರು ಅಡ್ಡಿ ಮಾಡುತ್ತಿದ್ದರೆ ಹೇಳಿ? ನನ್ನಿಂದ ಅಡ್ಡಿಯಾಗಿದ್ದರೆ ಹೇಳಿ. ಮತ್ತೆ ಯಾರಿಂದ ಅಡ್ಡಿಯಾಗಿದೆ ಹೇಳಿ. ಅವರು ಯಾರು ಎನ್ನುವುದನ್ನು ದಯವಿಟ್ಟು ಹೇಳಿ.

ಅಧ್ಯಕ್ಷರು:- ಮಾನ್ಯ ಬೈರೇಗೌಡರೆ, ತಾವು ಹೇಳಿದ್ದೀರಿ, ಅವರು ಉತ್ತರ ಕೊಟ್ಟಿದ್ದಾರೆ ಅದು ಮುಗಿಯಿತು. ಮಾನ್ಯ ವೆಂಕಟಪ್ಪನವರು ತಮ್ಮ ಪ್ರಶ್ನೆಯನ್ನು ಕೇಳಿ?

ಶ್ರೀ ಸಿ. ಬೈರೇಗೌಡ:- ನಾವು ಅಡ್ಡಿ ಮಾಡುತ್ತಿಲ್ಲ. ಯಾರು ಅಡ್ಡಿ ಮಾಡುತ್ತಿದ್ದಾರೆನ್ನುವುದನ್ನು ಅವರು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮುಖ್ಯ ಮಂತ್ರಿಗಳಿಗೆ ನಾವು ಸಂಪೂರ್ಣ ಬೆಂಬಲ ಕೊಡುತ್ತೇವೆ. ಅವರು ಹೋಗತಕ್ಕಂಥ ದಾರಿಯಲ್ಲಿ ನಾವು ಹೆಜ್ಜೆ ಹೆಜ್ಜೆಗೂ ಬೆಂಬಲ ಕೊಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಯಾರಾದರೂ ಅಡ್ಡಿ ಮಾಡಿದ್ದಾರೆಂದು ನಾನು ಹೇಳಲೇ ಇಲ್ಲ. ಸುಮ್ಮನೆ ನಾನು ಹೇಳದೆ ಇರುವುದನ್ನು ತಮ್ಮ ಬಾಯಲ್ಲಿ ಏತಕ್ಕೆ ಹೇಳುತ್ತೀರಿ? ಯಾರೂ ಅಡ್ಡಿ ಮಾಡಲಿಲ್ಲ. ಎಲ್ಲರ ಸಹಕಾರವಿದೆ. ಯಾರೂ ಹಸ್ತಕ್ಷೇಪ ಮಾಡಲಿಲ್ಲ. ಆದ್ದರಿಂದ ಅದರ ಬಗ್ಗೆ ಈಗ ಮಾತನಾಡುವುದು ಬೇಡ. ತಾವೇನು ನನ್ನ ಬಗ್ಗೆ ಅಭಿಪ್ರಾಯ ವ್ಯಕ್ತ ಮಾಡಿದ್ದೀರಿ, ಉತ್ತರ ಕುಮಾರರ ವಿಚಾರ, ಉತ್ತರ ಕುಮಾರ ತಾವಾ ನಾನಾ ಎಂದು ಮುಂದೆ ಕಾಣುತ್ತೀರಿ.

ವಿಷಯ:- ಹೆದ್ದಾರಿ ದರೋಡೆಗಳನ್ನು ತಪ್ಪಿಸಲು ತೆಗೆದುಕೊಂಡ ಕ್ರಮಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೯:- (೩೯೦)
ಎಂ.ವಿ. ವೆಂಕಟಪ್ಪ (ಮುಳಬಾಗಿಲು)
ಮುಖ್ಯಮಂತ್ರಿಗಳು ದಯವಿಟ್ಟು ಉತ್ತರಿಸುವಿರೆ?

೧) ರಾಜ್ಯದಲ್ಲಿ ರಸ್ತೆ ದರೋಡೆ ತಪ್ಪಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

ರಾಜ್ಯದಲ್ಲಿ ರಸ್ತೆ ದರೋಡೆ ತಪ್ಪಿಸಲು ಈ ಕೆಳಗಿನಂತೆ ಕ್ರಮ ಕೈಗೊಳ್ಳಲಾಗಿದೆ.

೧) ಕೃತ್ಯಕ್ಕೆ ಒಳಗಾಗಲಿರುವ ರಸ್ತೆಗಳಲ್ಲಿ ಬಿಗಿ ರಾತ್ರಿ ಗಸ್ತು ನೇಮಿಸುವುದು:ರಾತ್ರಿ ಸಂಚರಿಸುವ ವಾಹನಗಳನ್ನು ಗುಂಪುಗುಂಪಾಗಿ ಕೂಡಿಸಿ ಪೋಲೀಸ್ ಬೆಂಗಾವಲಿನಲ್ಲಿ ಕಳುಹಿಸಿಕೊಡುವುದು.

೨) ಹಿಂದೆ ದರೋಡೆಗೊಳಪಟ್ಟ ಹೆದ್ದಾರಿಗಳಲ್ಲಿ ಸಂಚರಿಸುವ ಪ್ರಯಾಣಿಕರ ಬಸ್ಸುಗಳಲ್ಲಿ ಕೆಲವು ನಿರ್ದಿಷ್ಟ ಸ್ಥಳಗಳವರೆಗೆ ಸಿ.ಓ.ಡಿ ಸಿಬ್ಬಂದಿಯವರ ಉಸ್ತುವಾರಿಯಲ್ಲಿ ಬಸ್ಸುಗಳು ಸಂಚರಿಸುವಂತೆ ನೇಮಕ ಮಾಡಲಾಗಿದೆ.

೩) ದರೋಡೆ ಬಗ್ಗೆ ಜಿಲ್ಲಾ ಪೋಲೀಸ್ ಅಧಿಕಾರಿ ಮತ್ತು ರೇಂಜ್ ಪೋಲೀಸ್ ಅಧಿಕಾರಿಯವರಿಗೆ ಜಾಗರೂಕರಾಗಿರುವಂತೆ ತಿಳುವಳಿಕೆ ನೀಡಿರುತ್ತದೆ. ಅವರು ಅಂತರ ಜಿಲ್ಲಾ ಮತ್ತು ಅಂತರರಾಜ್ಯ ಕಮ್ಮಟಗಳನ್ನು ಏರ್ಪಡಿಸಿ ದರೋಡೆ ತಡೆ ಮತ್ತು ಪತ್ತೆ ಬಗ್ಗೆ ವಿಚಾರ ವಿನಿಮಯ ನಡೆಸಿ, ದರೋಡೆ ತಡೆ ಮತ್ತು ಪತ್ತೆ ಬಗ್ಗೆ ಪ್ರಯತ್ನಿಸಲಾಗಿದೆ.

೪) ರಾಜ್ಯ ಮತ್ತು ರಾಜ್ಯದಿಂದ ಹೊರಗೆ ದರೋಡೆಕೋರರು ತಲೆಮರೆಸಿಕೊಳ್ಳುವ ಸ್ಥಳಗಳ ಮೇಲೆ ಆಯಾ ಸ್ಥಳೀಯ ಪೋಲೀಸರ ಸಹಕಾರದೊಡನೆ ಇದ್ದಕ್ಕಿದ್ದ ಹಾಗೆ ಧಾಳಿ ಮಾಡಿದ್ದರಿಂದ ಹಲವಾರು ದರೋಡೆ ಮೊಕದ್ದಮೆಗಳು ಪತ್ತೆಯಾಗಿರುತ್ತವೆ.

೫) ಸರ್ಕಾರಿ ಆದೇಶ ಸಂಖ್ಯೆ ೨೭೩:ಡಿ.ಇ:೨೭೩:ಪಿಒ:ಎನ್‌ಐಪಿಎ:೮೭ ದಿನಾಂಕ ೨೧-೩-೧೯೮೮ರಲ್ಲಿ ಎರಡು ದರೋಡೆ ನಿರೋಧಕ ದಳವನ್ನು ನಿಯೋಜಿಸಲಾಗಿದ್ದು, ಒಂದು ಪಡೆ ಬೆಂಗಳೂರಿನಲ್ಲೂ ಮತ್ತೊಂದು ಬಳ್ಳಾರಿಯಲ್ಲಿರುತ್ತದೆ. ಪ್ರತಿ ದಳಕ್ಕೆ ಒಬ್ಬ ಪೋಲೀಸ್ ಸೂಪರಿಂಡೆಂಟ್ ದರ್ಜೆಯ ಅಧಿಕಾರಿ ಈ ಪಡೆಗಳ ಮುಖ್ಯಸ್ಥರಾಗಿದ್ದು, ಇವರಿಗೆ ಸಹಕರಿಸಲು ಇಬ್ಬರು ಡೆಪ್ಯೂಟಿ ಪೋಲೀಸ್ ಸೂಪರಿಂಟೆಂಡಂಟರು, ನಾಲ್ವರು ಪೋಲೀಸ್ ಇನ್ಸ್‌ಪೆಕ್ಟರುಗಳು, ಹದಿನೆಂಟು ಪೋಲೀಸ್ ಕಾನ್ಸ್‌ಟೇಬಲ್‌ಗಳು ಮತ್ತು ಸಹಾಯಕ ಸಿಬ್ಬಂದಿ ಇರುತ್ತದೆ. ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಡಿ ೧೪೧ ಪಿಒಪಿ ೯೨ ದಿನಾಂಕ: ೬.೨.೯೨ರ ಮೇರೆಗೆ ಮತ್ತೊಂದು ಪಡೆ ಮಂಜೂರಾಗಿದ್ದು, ಅದಕ್ಕೆ ಒಬ್ಬ ಅಡಿಷನಲ್ ಪೋಲೀಸ್ ಸೂಪರಿಂಟೆಂಡೆಂಟ್‌ರವರನ್ನು ಮಂಜೂರುಮಾಡಿದೆ.

೬) ಆಗ್ಗಾಗ್ಗೆ ಅಂತರರಾಜ್ಯ ಸಮಾವೇಶ ಮತ್ತು ದಕ್ಷಿಣ ರಾಜ್ಯಗಳ ಸಿಐಡಿಯ ಪ್ರಧಾನರ ಸಮ್ಮೇಳನಗಳನ್ನು ಏರ್ಪಡಿಸಿದ್ದು, ದರೋಡೆ ಬಗ್ಗೆ ಚರ್ಚಿಸಿ, ದರೋಡೆ ಗ್ಯಾಂಗ್ ಹಿಡಿಯುವ ಬಗೆ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

೭) ಸಿಒಡಿ: ಐಜಿಪಿರವರು ಅಂತರರಾಜ್ಯ ಜಿಲ್ಲಾ ಪೋಲೀಸ್ ಅಧಿಕಾರಿಗಳ ಸಮಾವೇಶ ಏರ್ಪಡಿಸಿ, ಅಂತರ ಜಿಲ್ಲಾ ಪೋಲೀಸರ ಸಹಯೋಗದಿಂದ ದರೋಡೆ ಪತ್ತೆ ಮತ್ತು ತಡೆಗೆ ಕಾರ್ಯೋನ್ಮುಖರಾಗಲು ವ್ಯವಸ್ಥೆ ಮಾಡಲಾಗಿದೆ.

೮) ಪೋಲೀಸ್ ಸೂಪರಿಂಟೆಂಡೆಂಟ್ ದರ್ಜೆಯ ಅಧಿಕಾರಿಯೊಬ್ಬರನ್ನು ಅಂತರರಾಜ್ಯ ದರೋಡೆ ಕಾರ್ಯಾಚಾರಣೆ ಬಗ್ಗೆ ಸಂಪರ್ಕಾಧಿಕಾರಿಯಾಗಿ ನಿಯೋಜಿಸಲಾಗಿದೆ.

೯) ಆಯ್ದ ದರೋಡೆ ಪ್ರಕರಣಗಳಲ್ಲಿ ಬೆರಳಚ್ಚು ತಜ್ಞರು ಆಗಿಂದಾಗ್ಗೆ ಹೊರರಾಜ್ಯಗಳಿಗೆ ಭೇಟಿ ಕೊಡುತ್ತಿದ್ದಾರೆ.

೧೦) ದರೋಡೆಕೋರರ ಭಾವಚಿತ್ರಗಳನ್ನು ಮತ್ತು ವಿವರಣೆಯನ್ನು ಸಿಒಡಿಯ ಸಿಐಬಿಯಲ್ಲಿ ಶೇಖರಿಸಲಾಗಿದ್ದು, ಇವುಗಳನ್ನು ದರೋಡೆ ನಡೆದಾಗ ದರೋಡೆಕೋರರನ್ನು ಗುರುತಿಸಲು ಉಪಯೋಗಿಸಲಾಗುತ್ತಿದೆ.

<u>೧೨.೦೫ ಪಿ.ಎಂ.</u>

ಶ್ರೀ ಎಂ.ವಿ. ವೆಂಕಟಪ್ಪ:- ಹೆದ್ದಾರಿ ದರೋಡೆಗಳಲ್ಲಿ ಇದುವರೆಗೆ ನಡೆದ ಪ್ರಕರಣಗಳೆಷ್ಟು? ಇದುವರೆಗೆ ಎಷ್ಟು ಜನರನ್ನು ಹಿಡಿದಿದ್ದಾರೆ? ಅಂಡರ್ ಟ್ರಯಲ್ಸ್ ಎಷ್ಟು ಜನ ಇದ್ದಾರೆ? ಎಷ್ಟು ಜನರಿಗೆ ಶಿಕ್ಷೆಯಾಗಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ:- ೧೯೯೦ರಲ್ಲಿ ನಡೆದ ಪ್ರಕರಣಗಳು ೨೯: ೧೯೯೧ರಲ್ಲಿ ೫೩: ೧೯೯೨ರಲ್ಲಿ ೪೮: ಪತ್ತೆಯಾದ ಪ್ರಕರಣಗಳು ೧೯೯೦ರಲ್ಲಿ ೧೦, ೧೯೯೧ರಲ್ಲಿ ೨೧, ೧೯೯೨ರಲ್ಲಿ ೮. ಶಿಕ್ಷೆಯಾದಂಥ ಪ್ರಕರಣಗಳ ಅಂಕಿಸಂಖ್ಯೆಗಳು ನನ್ನ ಹತ್ತಿರ ಇಲ್ಲ.

ಶ್ರೀ ಎಂ.ವಿ. ವೆಂಕಟಪ್ಪ:- ಈ ದರೋಡೆಗಳಲ್ಲಿ whether they are professionals? What is the modus. operandi of those people? ಇವರು ಪ್ರೊಫೆಶನಲ್ಸ್, ನಿರುದ್ಯೋಗಿಗಳೆ ಮತ್ತು ಅವರಲ್ಲಿ ಯಾವ ರಾಜ್ಯದವರು ಹೆಚ್ಚಾಗಿದ್ದಾರೆ?

ಶ್ರೀ ಎಂ. ವೀರಪ್ಪ ಮೊಯಿಲಿ:- ಇದು ಒಂದೊಂದು ಪ್ರಕರಣಕ್ಕೆ ಹೊಂದಿಕೊಂಡಿರುತ್ತದೆ. ತಾವು ಸ್ಪಷ್ಟವಾದಂಥ ಪ್ರಕರಣದ ಬಿವರ ಕೇಳಿದರೆ ಅವರು ಪ್ರೊಫೆಶನಲ್ಸ್ ಅಥವಾ ಬೇರೆ ಯಾರು ಎಂದು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ:- ರಾತ್ರಿ ವೇಳೆ ಬಸ್ಸುಗಳನ್ನು ನಡೆಸುವಾಗ ಈ ಸಮಸ್ಯೆ ಬರುತ್ತದೆ either private or KSRTC. ಒಂದುವೇಳೆ ಡ್ರೈವರುಗಳು ಮತ್ತು ಕಂಡಕ್ಟರುಗಳು ರಿವಾಲ್ವರ್ ಲೈಸೆನ್ಸ್‌ಗೆ ಅರ್ಜಿ ಹಾಕಿದರೆ ಸರ್ಕಾರದವರು ಕೊಡುತ್ತಾರೆಯೆ? ಅವುಗಳನ್ನಾದರೂ ಕೊಟ್ಟರೆ ದರೋಡೆಕೋರರು ಭಯದಿಂದಾದರೂ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಸದಸ್ಯರ ಸಲಹೆ ಏನಿದೆ, ಅದನ್ನು ನಾನು ವಿಚಾರ ಮಾಡುತ್ತೇನೆ.

ಅಧ್ಯಕ್ಷರು:- ಷಫಿ ಅಹಮದ್‌ರವರೇ, ನಿಮ್ಮ ೧೬೧ನೇ ಪ್ರಶ್ನೆಗೆ ಹದಿನೈದು ದಿವಸ ಟೈಮ್ ಬೇಕು ಎಂದು ಹೇಳಿದ್ದಾರೆ.

ವಿಷಯ:- ಚಿಕ್ಕೋಡಿ ತಾಲ್ಲೂಕಿನಲ್ಲಿ ಕೆ.ಎಸ್.ಆರ್.ಟಿ.ಸಿ. ವಿಭಾಗ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೧: (೨೨೫)
ಶ್ರೀ ಎಸ್. ಎಸ್. ಭೀಮಣ್ಣನವರ್ (ಚಿಕ್ಕೋಡಿ)
ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗವನ್ನು ತೆರೆಯಬೇಕೆಂಬ ಬೇಡಿಕೆ ಸರ್ಕಾರದ ಮುಂದಿದೆಯೆ?

ಆ) ಹಾಗಿಲ್ಲದಿದ್ದಲ್ಲಿ, ಗಡಿ ಪ್ರದೇಶಾಭಿವೃದ್ಧಿಯ ದೃಷ್ಟಿಯಿಂದ ಮೇಲ್ಕಂಡ ಸಂಸ್ಥೆಯ ವಿಭಾಗವನ್ನು ಸದರಿ ಪಟ್ಟಣದಲ್ಲಿ ತೆರೆಯಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಭೀಮಣ್ಣ ಖಂಡ್ರೆ
(ಸಾರಿಗೆ ಸಚಿವರು)

ಇಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈಗಾಗಲೇ ಜಿಲ್ಲಾ ಕೇಂದ್ರವಾದ ಬೆಳಗಾವಿಯಲ್ಲಿ ವಿಭಾಗೀಯ ಕಛೇರಿಯನ್ನು ಸ್ಥಾಪಿಸಿದೆ. ಪ್ರಸ್ತುತ ಈ ಜಿಲ್ಲೆಯಲ್ಲಿ ಮತ್ತೊಂದು ವಿಭಾಗೀಯ ಕಛೇರಿಯನ್ನು ತೆರೆಯುವ ಅವಶ್ಯಕತೆ ಉದ್ಭವಿಸುವುದಿಲ್ಲ.

ಶ್ರೀ ಎಸ್.ಎಸ್. ಭೀಮಣ್ಣನವರ್:- ಮಾನ್ಯ ಅಧ್ಯಕ್ಷರೆ ಚಿಕ್ಕೋಡಿ ಗಡಿನಾಡಿನಲ್ಲಿದ್ದು ಚಿಕ್ಕೋಡಿಯಿಂದ ಮಹಾರಾಷ್ಟ್ರಕ್ಕೆ ಮತ್ತು ಬೇರೆ ಬೇರೆ ರಾಜ್ಯಗಳಿಗೆ ಅನೇಕ ಬಸ್ಸುಗಳನ್ನು ಓಡಾಡುತ್ತಿದ್ದು ಚಿಕ್ಕೋಡಿ ದೊಡ್ಡ ತಾಲ್ಲೂಕು ಇದ್ದು, ಅಲ್ಲಿ ವಿಭಾಗೀಯ ಘಟಕವನ್ನು ತೆಗೆಯುವುದಕ್ಕೆ ಏನು ಅಡಚಣೆ ಇದೆಯೆಂದು ಸಾರಿಗೆ ಮಂತ್ರಿಗಳನ್ನು ತಮ್ಮ ಮೂಲಕ ಕೇಳುತ್ತೇನೆ.